# ಕರ್ನಾಟಕ ವಿಧಾನ ಪರಿಷತ್ತು

| | |
|---|---|
| ಚುಕ್ಕೆ ಗುರುತಿಲ್ಲದ ಪ್ರಶ್ನೆ ಸಂಖ್ಯೆ | 958 |
| ಸದಸ್ಯರ ಹೆಸರು | ಶ್ರೀ ಕೇಶವ ಪ್ರಸಾದ್ ಎಸ್<br>(ವಿಧಾನಸಭೆಯಿಂದ ಚುನಾಯಿತರಾದವರು) |
| ಉತ್ತರಿಸುವ ದಿನಾಂಕ | 14-03-2025 |
| ಉತ್ತರಿಸುವ ಸಚಿವರು | ಕೃಷಿ ಸಚಿವರು |

| ಕ್ರ. ಸಂ. | ಪ್ರಶ್ನೆ | ಉತ್ತರ |
|---|---|---|
| ಅ) | ರಾಜ್ಯದಲ್ಲಿ ರೈತರಿಗೆ ಸಬ್ಸಿಡಿ ದರದಲ್ಲಿ ಯೂರಿಯಾ ಮಾರಾಟ ಮಾಡಲಾಗುತ್ತಿದೆಯೇ; ನೀಡುತ್ತಿರುವ ಸಬ್ಸಿಡಿ ಮೊತ್ತ ಎಷ್ಟು; ಪ್ರಸಕ್ತ ಸಾಲಿನಲ್ಲಿ ಎಷ್ಟು ರೈತರು ಸಬ್ಸಿಡಿ ದರದಲ್ಲಿ ಯೂರಿಯಾ ಖರೀದಿಸಿದ್ದಾರೆ; (ಜಿಲ್ಲಾವಾರು ವಿವರ ನೀಡುವುದು) | ಹೌದು, ರಾಜ್ಯದಲ್ಲಿ ರೈತರಿಗೆ ಯೂರಿಯಾ ರಸಗೊಬ್ಬರವನ್ನು ಸಬ್ಸಿಡಿ ದರದಲ್ಲಿ ಮಾರಾಟ ಮಾಡಲಾಗುತ್ತಿದೆ.<br>ದೇಶದಲ್ಲಿ, ಯೂರಿಯಾ ಮಾತ್ರ ನಿಯಂತ್ರಿತ ರಸಗೊಬ್ಬರವಾಗಿದ್ದು, ಇದನ್ನು ಶಾಸನಬದ್ಧ ಅಧಿಸೂಚಿತ ಏಕರೂಪದ ಮಾರಾಟ ಬೆಲೆಗೆ ಮಾರಾಟ ಮಾಡಲಾಗುತ್ತಿದೆ. ಯೂರಿಯಾ ರಸಗೊಬ್ಬರದ ಗರಿಷ್ಠ ಮಾರಾಟ ಬೆಲೆಯನ್ನು ಕೇಂದ್ರ ಸರ್ಕಾರವು ನಿಯಂತ್ರಿಸುತ್ತದೆ.<br>ಯೂರಿಯಾ ರಸಗೊಬ್ಬರದ ಸಹಾಯಧನವು ಯೂರಿಯಾ ಉತ್ಪಾದನಾ ಘಟಕಗಳ ಉತ್ಪಾದನೆಯ ತಂತ್ರಜ್ಞಾನದ ಮೇಲೆ ಅವಲಂಬಿತವಾಗಿದ್ದು, ಪ್ರಸಕ್ತ ಕೇಂದ್ರ ಸರ್ಕಾರದಿಂದ ಪ್ರತಿ ಯೂರಿಯಾ ರಸಗೊಬ್ಬರದ ಚೀಲಕ್ಕೆ (45 ಕೆ.ಜಿ) ರೂ.1168 ರಿಂದ ರೂ. 2112.52 ರಷ್ಟು ಸಹಾಯಧನವನ್ನು ನೀಡಲಾಗುತ್ತಿದೆ.<br>ರೈತರಿಗೆ ರಸಗೊಬ್ಬರಗಳನ್ನು ಪಾಯಿಂಟ್ ಆಫ್ ಸೇಲ್(PoS) ಉಪಕರಣದ ಮುಖಾಂತರ ಮಾರಾಟ ಮಾಡಲಾಗುತ್ತಿದ್ದು, ಸದರಿ ಉಪಕರಣದ ಮೂಲಕ ಮಾರಾಟವಾಗುವ ವಿವರವನ್ನು ಕೇಂದ್ರ ಸರ್ಕಾರದ iFMS (integrated Fertilizer Management System) ಪೋರ್ಟಲ್‌ಗೆ ಸಂಯೋಜಿಸಲಾಗಿದೆ.<br><br>iFMS ಪೋರ್ಟಲ್‌ರನ್ವಯ ಪ್ರಸಕ್ತ ಸಾಲಿನಲ್ಲಿ 19,77,136 (ಸಂಖ್ಯೆ) ರೈತರು ಸಹಾಯಧನದ ಯೂರಿಯಾ ರಸಗೊಬ್ಬರವನ್ನು ಖರೀದಿಸಿರುತ್ತಾರೆ (ಜಿಲ್ಲಾವಾರು ವಿವರವನ್ನು ಅನುಬಂಧದಲ್ಲಿ ಒದಗಿಸಲಾಗಿದೆ). |

| | | |
|---|---|---|
| ಆ) | ರಾಜ್ಯದಲ್ಲಿ ಸಬ್ಸಿಡಿ ಯೂರಿಯಾವನ್ನು ಅಕ್ರಮವಾಗಿ ಕೈಗಾರಿಕೆಗಳಿಗೆ ಮಾರಾಟ ಮಾಡುತ್ತಿರುವ ಪ್ರಕರಣಗಳು ಹೆಚ್ಚಾಗಿರುವುದು ಸರ್ಕಾರದ ಗಮನಕ್ಕೆ ಬಂದಿದೆಯೇ; | ರಾಜ್ಯದಲ್ಲಿ ಸಬ್ಸಿಡಿ ಯೂರಿಯಾವನ್ನು ಕೃಷಿಯೇತರ ಬಳಕೆಗೆ ಬಳಸುತ್ತಿರುವ ಪ್ರಕರಣಗಳು ಸರ್ಕಾರದ ಗಮನಕ್ಕೆ ಬಂದಿರುತ್ತದೆ. |
| ಇ) | ಹಾಗಿದ್ದಲ್ಲಿ, ಈವರೆಗೆ ಎಷ್ಟು ಪ್ರಕರಣಗಳು ದಾಖಲಾಗಿವೆ; ಎಷ್ಟು ಜನರ ಮೇಲೆ ಪ್ರಕರಣ ದಾಖಲಾಗಿವೆ; ಅವರ ವಿರುದ್ಧ ಕೈಗೊಂಡಿರುವ ಕ್ರಮಗಳೇನು? | ಪ್ರಸಕ್ತ ಸಾಲಿನಲ್ಲಿ, ರಾಜ್ಯದಲ್ಲಿ 04 ಪ್ರಕರಣಗಳು ದಾಖಲಾಗಿರುತ್ತವೆ (ತುಮಕೂರು, ಚಿಕ್ಕಬಳ್ಳಾಪುರ, ಧಾರವಾಡ ಮತ್ತು ಚಿತ್ರದುರ್ಗ ಜಿಲ್ಲೆ).<br>ಸದರಿ ಪ್ರಕರಣಗಳಿಗೆ ಸಂಬಂಧಿಸಿದಂತೆ, ಒಟ್ಟು 13 ತಪ್ಪಿತಸ್ಥರ ವಿರುದ್ಧ ಸಂಬಂಧಪಟ್ಟ ಪೋಲೀಸ್ ಠಾಣೆಗಳಲ್ಲಿ ಎಫ್.ಐ.ಆರ್ ದಾಖಲಾಗಿದ್ದು, ಪ್ರಕರಣಗಳು ತನಿಖಾ ಹಂತದಲ್ಲಿರುತ್ತವೆ. |

ಸಂಖ್ಯೆ: AGRI/77/ACT/2025

**(ಎನ್. ಚಲುವರಾಯಸ್ವಾಮಿ)**

ಕೃಷಿ ಸಚಿವರು

# ಅನುಬಂಧ

| ರಾಜ್ಯದಲ್ಲಿ 2024-25ನೇ ಸಾಲಿನಲ್ಲಿ ಯೂರಿಯಾ ರಸಗೊಬ್ಬರ ಖರೀದಿ ಮಾಡಿದ ಜಿಲ್ಲಾವಾರು ರೈತರ ಸಂಖ್ಯೆ | | |
|---|---|---|
| **ಕ್ರ.ಸಂ** | **ಜಿಲ್ಲೆ** | **ಒಟ್ಟು ಖರೀದಿದಾರರು** |
| 1 | ಬಾಗಲಕೋಟೆ | 92437 |
| 2 | ಬೆಂಗಳೂರು ಗ್ರಾಮಾಂತರ | 47561 |
| 3 | ಬೆಳಗಾವಿ | 175896 |
| 4 | ಬಳ್ಳಾರಿ | 50493 |
| 5 | ಬೆಂಗಳೂರು ನಗರ | 18211 |
| 6 | ಬೀದರ್ | 31904 |
| 7 | ವಿಜಯಪುರ | 90676 |
| 8 | ಚಾಮರಾಜನಗರ | 37484 |
| 9 | ಚಿಕ್ಕಬಳ್ಳಾಪುರ | 75398 |
| 10 | ಚಿಕ್ಕಮಗಳೂರು | 48023 |
| 11 | ಚಿತ್ರದುರ್ಗ | 61683 |
| 12 | ದಕ್ಷಿಣ ಕನ್ನಡ | 25180 |
| 13 | ದಾವಣಗೆರೆ | 62984 |
| 14 | ಧಾರವಾಡ | 46976 |
| 15 | ಗದಗ | 58147 |
| 16 | ಕಲಬುರಗಿ | 51985 |
| 17 | ಹಾಸನ | 122789 |
| 18 | ಹಾವೇರಿ | 88775 |
| 19 | ಕೊಡಗು | 17458 |
| 20 | ಕೋಲಾರ | 57284 |
| 21 | ಕೊಪ್ಪಳ | 57639 |
| 22 | ಮಂಡ್ಯ | 99599 |
| 23 | ಮೈಸೂರು | 85575 |
| 24 | ರಾಯಚೂರು | 94912 |
| 25 | ರಾಮನಗರ | 68921 |
| 26 | ಶಿವಮೊಗ್ಗ | 65609 |
| 27 | ತುಮಕೂರು | 91091 |
| 28 | ಉಡುಪಿ | 10265 |
| 29 | ಉತ್ತರ ಕನ್ನಡ | 29811 |
| 30 | ವಿಜಯನಗರ | 46210 |
| 31 | ಯಾದಗಿರಿ | 66160 |
| | **ಒಟ್ಟು** | **1977136** |

ಮೂಲ:NIC, ಕೇಂದ್ರ ಸರ್ಕಾರ